ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಕಾಲೋನಿಗಳಿವೆ?

ಆ) ಸದರಿ ಕಾಲೋನಿಗಳ ಎಲ್ಲಾ ನಿವಾಸಿಗಳಿಗೆ ವಿದ್ಯುಚ್ಛಕ್ತಿ ಹಾಗೂ ನೀರಿನ ಸೌಕರ್ಯ ಒದಗಿಸಲಾಗಿದೆಯೇ?

ಇ) ಸುರತ್ಕಲ್ ಕ್ಷೇತ್ರದ ಉದಯನಗರದ ಪರಿಶಿಷ್ಟ ವರ್ಗದ ಕೊರಗ ಜನಾಂಗದ ಕಾಲೋನಿಯವರಿಗೆ ಕನಿಷ್ಟ ಸೌಲಭ್ಯವನ್ನು ನೀಡಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಸದರಿ ಕೊರತೆಯನ್ನು ನೀಗಲು ಸರ್ಕಾರವು ಕೈಗೊಳ್ಳುವ ಪರಿಹಾರ ಕ್ರಮಗಳೇನು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಸುರತ್ಕಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 28 ಪರಿಶಿಷ್ಟಜಾತಿ ಹಾಗೂ 16 ಪರಿಶಿಷ್ಟ ಪಂಗಡದ ಕಾಲೋನಿಗಳಿವೆ.

ಆ) ಹೌದು

ಇ) ಈಗಾಗಲೇ ಕನಿಷ್ಟ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಹೆಚ್ಚುವರಿ ಸೌಲಭ್ಯಗಳ ಬಗ್ಗೆ ಬೇಡಿಕೆ ಬಂದಿರುತ್ತದೆ.

ಈ) ಸುರತ್ಕಲ್ ವಿಧಾನಸಭಾ ಕ್ಷೇತ್ರದ ಉದಯನಗರ ಕೊರಗ ಕಾಲೋನಿಗೆ ಈಗಾಗಲೇ ಪ್ರತಿ ಮನೆಗೆ ನಲ್ಲಿ ಸಂಪರ್ಕದ ಮೂಲಕ ಕುಡಿಯುವ ನೀರಿನ ಸೌಲಭ್ಯ, ಮನೆ ದುರಸ್ತಿ ಹಸು, ಘಟಕ, ದಾರಿದೀಪ ಪ್ರತಿ ಮನೆಗೆ ಭಾಗ್ಯಜ್ಯೋತಿ ಯೋಜನೆ ಮೂಲಕ ಪ್ರತ್ಯೇಕ ಮೀಟರ್ ನೀಡಿ ವಿದ್ಯುತ್ ಸಂಪರ್ಕ ಶೌಚಾಲಯ ಮುಂತಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ. ಕಾಲೋನಿ ನಿವಾಸಿಗಳು ನಿವೇಶನ ಮಂಜೂರಾತಿ ಹಕ್ಕುಪತ್ರ, ಸರ್ಕಾರದಿಂದ ಮನೆ ನಿರ್ಮಾಣ ಮತ್ತು ದುರಸ್ತಿಗಾಗಿ ಹೆಚ್ಚುವರಿ ಸಹಾಯಧನ ಮತ್ತು ಹೆಚ್ಚುವರಿ ನಲ್ಲಿ ಸಂಪರ್ಕ, ವರ್ಕ್‌ಶೆಡ್ ನಿರ್ಮಾಣ ಹಾಗೂ ಶೌಚಾಲಯಕ್ಕಾಗಿ ಬೇಡಿಕೆ ಬಂದಿದ್ದು ಈ ಸೌಲಭ್ಯಗಳನ್ನು ಹಂತಹಂತವಾಗಿ ಹಣದ ಲಭ್ಯತೆಯನ್ನು ನೋಡಿಕೊಂಡು ಒದಗಿಸಲಾಗುವುದು.

ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿರುವ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ

ಉದ್ಯೋಗವಕಾಶ.

99 (208)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?ೀ

ಅ) ಸುರತ್ಕಲ್ ಕ್ಷೇತ್ರದಲ್ಲಿ 1995ರಿಂದ ಇಲ್ಲಿಯವರೆಗೆ ಸ್ಥಾಪನೆಗೊಂಡ ಬೃಹತ್ ಮತ್ತು ಸಣ್ಣ ಕೈಗಾರಿಕೆಗಳೆಷ್ಟು?

ಆ) ಈ ಬೃಹತ್ ಮತ್ತು ಸಣ್ಣ ಕೈಗಾರಿಕೆಗಳಿಗೆ ಉದ್ಯೋಗಿಗಳನ್ನು ಯಾವ ಕ್ರಮದಲ್ಲಿ ನೇಮಕಗೊಳಿಸಲಾಗುವುದು?

ಇ) ಸ್ಥಳೀಯರಲ್ಲದವರಿಗೆ ಹೆಚ್ಚಿನ ಉದ್ಯೋಗ ನೀಡಿರುವ ಬಗ್ಗೆ ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ, ಸ್ಥಳೀಯರಿಗೆ ಅವಕಾಶ ಒದಗಿಸಲು ಅನುಕೂಲವಾಗುವಂತೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎ.ಮೊಯಿದ್ದೀನ್ (ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಸಚಿವರು):

ಅ) ಬೃಹತ್ ಪ್ರಮಾಣದ ಕೈಗಾರಿಕೆಗಳು- 2, ಮತ್ತು

ಸಣ್ಣ ಪ್ರಮಾಣದ ಕೈಗಾರಿಕೆಗಳು- 175

ಆ) ಪ್ರತಿಯೊಂದು ಕೈಗಾರಿಕಾ ಘಟಕಗಳಲ್ಲಿ ತನ್ನದೇ ಆದ ನೇಮಕಾತಿ ವಿಧಾನಗಳಿರುತ್ತವೆ.

ಇ) ಇಲ್ಲ.

ಈ) ಸರ್ಕಾರವು ನೂತನ ಕೈಗಾರಿಕಾ ಘಟಕಗಳಿಗೆ ರಿಯಾಯಿತಿ ಮತ್ತು ಸವಲತ್ತುಗಳನ್ನು ನೀಡುವಾಗ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂಬ ಷರತ್ತನ್ನು ವಿಧಿಸುತ್ತದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ನೀಡುವ ಬಗ್ಗೆ ಮೇಲ್ವಿಚಾರಣೆಯನ್ನು ನಡೆಸುತ್ತಿರುತ್ತದೆ.

ನರಸಿಂಹರಾಜ ವಿಧಾನ ಸಭಾಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣ

100 (172)